**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2019–20** **ದಿನಾಂಕ: 30–08–2019**

## ಪತ್ರಿಕಾ ಆಮಂತ್ರಣ

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯಿದೆ – 2005 ಕುರಿತ ಕಾರ್ಯಾಗಾರ.

ಉದ್ಘಾಟನೆ : ಎಲ್ ಕೃಷ್ಣಮೂರ್ತಿ
ರಾಜ್ಯ ಮಾಹಿತಿ ಹಕ್ಕು ಆಯುಕ್ತರು

ಅಧ್ಯಕ್ಷತೆ : ಎನ್.ಪಿ. ರಮೇಶ್
ರಾಜ್ಯ ಮಾಹಿತಿ ಹಕ್ಕು ಆಯುಕ್ತರು

ಉಪನ್ಯಾಸಕರು : ವಿಷಯ ತಜ್ಞರು

ದಿನಾಂಕ : 31–08–2019 ಬೆಳಿಗ್ಗೆ 10–30 ಗಂಟೆ

ಸ್ಥಳ : ಭಾರತೀಯ ಜನಸಂಖ್ಯಾ ಯೋಜನಾ ಸಂಸ್ಥೆ ಕಟ್ಟಡ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
16 ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003

**2. ಬೆಂಗಳೂರು ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಕುರಿತ ಸಭೆ**

**ಅಧ್ಯಕ್ಷತೆ :**

**ಡಾ ಸಿ ಎನ್ ಅಶ್ವಥ ನಾರಾಯಣ್**
**ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ,**
**ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ**
**ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು,**

**ದಿನಾಂಕ : 31–08–2019 ಸಮಯ : 11–00 ಗಂಟೆ**

**ಸ್ಥಳ : ಕೊಠಡಿ ಸಂಖ್ಯೆ : 334, ಮೂರನೇ ಮಹಡಿ,**
**ವಿಧಾನ ಸೌಧ,**
**ಬೆಂಗಳೂರು – 560 001.**

( ವಿಶೇಷ ಸೂಚನೆ : ಸಭೆ ಪ್ರಾರಂಭವಾದ ಮೊದಲ ಮೂರು ನಿಮಿಷಗಳು ಛಾಯಾಚಿತ್ರೀಕರಣ ಮತ್ತು ವಿಡೀಯೋ ಚಿತ್ರೀಕರಣಕ್ಕೆ ಅವಕಾಶವಿದೆ. ಸಭೆ ಮುಕ್ತಾಯಗೊಂಡ ನಂತರ, ಪತ್ರಿಕಾಗೋಷ್ಠಿ ಇರುತ್ತದೆ. )

PRESS RELEASE

Workshop on Re-purpose Used Cooking Oil on September 11 in City

BENGALURU, AUGUST 30 (KARNATAKA INFORMATION ) :

The Commissioner for Food Safety and Quality of the Public Health Institute in association with the Food Safety and Standards Authority of India has organized an one-day workshop on Re-purpose Used Cooking Oil on September 11 at the Mahatma Gandhi Media Centre at Vaartha Soudha in Bengluru.

The Commissioner of the Department of Health and Family Welfare Mr Pankaj Kumar Pandey, who is also the Secretary to the Government in the Department of Information and Public Relations, will inaugurate this workshop at which members representing the Karnataka State Bio-Energy Development Board, Eco-Green Fuels Private Limited, Karnataka Pradesh Hotels and Restaurants Association and Bruhat Bengaluru Hotels Association are scheduled to participate, says an official press release.

*********

dpm

**ಪತ್ರಿಕಾ ಪ್ರಕಟಣೆ**

**ಸೆಪ್ಟೆಂಬರ್ 11 ರಂದು ನಗರದಲ್ಲಿ ಮರು-ಉದ್ದೇಶಿತ ಬಳಕೆಯಾದ ಅಡುಗೆ ಎಣ್ಣೆ ಕುರಿತ ಕಾರ್ಯಾಗಾರ**

**ಬೆಂಗಳೂರು, ಆಗಸ್ಟ 30 ( ಕರ್ನಾಟಕ ವಾರ್ತೆ ) :**

ಭಾರತೀಯ ಆಹಾರ ಸುರಕ್ಷತಾ ಹಾಗೂ ಮಾನದಂಡಗಳ ಪ್ರಾಧಿಕಾರದ ಸಹಯೋಗದೊಂದಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತರು ಸೆಪ್ಟೆಂಬರ್ 11 ರಂದು ನಗರದ ವಾರ್ತಾ ಸೌಧದ ಮಹಾತ್ಮ ಗಾಂಧಿ ಮಾಧ್ಯಮ ಕೇಂದ್ರದಲ್ಲಿ ಮರು-ಉದ್ದೇಶಿತ ಬಳಕೆಯಾದ ಅಡುಗೆ ಎಣ್ಣೆ ಕುರಿತ ಒಂದು-ದಿನದ ಕಾರ್ಯಾಗಾರವನ್ನು ಆಯೋಜಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರೂ ಆದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ಪಂಕಜ್ ಕುಮಾರ್ ಪಾಂಡೆ ಅವರು ಉದ್ಘಾಟಿಸಲಿರುವ ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಎಕೋ-ಗ್ರೀನ್ ಫ್ಯೂಯೆಲ್ಸ್ ಪ್ರೈವೇಟ್ ಲಿಮಿಟೆಡ್, ಕರ್ನಾಟಕ ಪ್ರದೇಶ ಹೋಟೆಲ್ಸ್ ಅಂಡ್ ರೆಸ್ಟೋರೆಂಟ್ಸ್

**ಅಸೋಸಿಯೋಷನ್ ಹಾಗೂ ಬೃಹತ್ ಬೆಂಗಳೂರು ಹೋಟೆಲ್ಸ್ ಅಸೋಸಿಯೋಷನ್ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

***********

**ಡಿ ಪಿ ಎಂ**

## ಸೆಪ್ಟೆಂಬರ್ ಮಾಹೆಯಲ್ಲಿ "ಪೋಷಣ್ ಯೋಜನೆ ಅಭಿಯಾನ"

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಮಕ್ಕಳು ಹಾಗೂ ಮಹಿಳೆಯರಲ್ಲಿ ಉಂಟಾಗುವ ಪೋಷ್ಠಿಕಾಂಶದ ಕೊರತೆ ನೀಗಿಸುವ ನಿಟ್ಟಿನಲ್ಲಿ ಇದೇ ಸೆಪ್ಟೆಂಬರ್ ಮಾಹೆಯಲ್ಲಿ "ಪೋಷಣ್ ಯೋಜನೆ ಅಭಿಯಾನ್" ಅನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮ ಅವರು ತಿಳಿಸಿದರು.

ಅವರು ಇಂದು ತಮ್ಮ ಕಚೇರಿಯಲ್ಲಿ ಈ ಕುರಿತು ಹಮ್ಮಿಕೊಳ್ಳಲಾದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

0–6 ವರ್ಷಗಳ ಮಕ್ಕಳಲ್ಲಿ ಉಂಟಾಗುವ ಕುಂಠಿತ ಬೆಳವಣಿಗೆ ಅಪೌಷ್ಠಿಕತೆ ತಡೆಗಟ್ಟುವುದು ಹಾಗೂ ಕಡಿಮೆಗೊಳಿಸುವುದು, 6 ರಿಂದ 59 ತಿಂಗಳ ಮಕ್ಕಳಲ್ಲಿ ರಕ್ತಹೀನತೆ ಕಡಿಮೆಗೊಳಿಸುವುದು, 15–49 ವರ್ಷದ ಕಿಶೋರಿ/ಮಹಿಳೆಯರಲ್ಲಿ ಉಂಟಾಗುವ ರಕ್ತಹೀನತೆಯನ್ನು ಕಡಿಮೆಗೊಳಿಸುವುದು ಹಾಗೂ ಕಡಿಮೆ ತೂಕದ ಮಕ್ಕಳ ಜನನವನ್ನು ಕಡಿಮೆಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಪ್ರತಿ ವರ್ಷದಂತೆ ಈ ವರ್ಷ ಸಹ ಸೆಪ್ಟೆಂಬರ್‌ನಲ್ಲಿ ಈ ಅಭಿಯಾನ ಯೋಜನೆಯನ್ನು ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಆಚರಿಸಲಾಗುತ್ತಿದ್ದು, ಇದನ್ನು ಯಶ್ವಸಿಗೊಳಿಸಲು ಎಲ್ಲರ ಕರ್ತವ್ಯ ಎಂದರು.

ಮಕ್ಕಳಲ್ಲಿ ಉಂಟಾಗುವ ರಕ್ತಹೀನತೆ, ಅತಿಸಾರ ಭೇದಿಯನ್ನು ತಡೆಯುವುದಲ್ಲದೆ ಕೈತೊಳೆಯುವಾಗ ನೈರ್ಮಲ್ಯ ಕಾಪಾಡುವುದು ಹಾಗೂ ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುವುದು ಸಹ ಕಾರ್ಯಕ್ರಮದಲ್ಲಿ ಸೇರಿದೆ ಎಂದರು

ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ, ನೈರ್ಮಲ್ಯ ಹಾಗೂ ಪೌಷ್ಠಿಕ ಆಹಾರ ದಿನವನ್ನು ಆಚರಿಸಬೇಕು. ಸಮುದಾಯ ಆಧಾರಿತ ಚಟುವಟಿಕೆಗಳು, ಬಾಲ್ಯದ ಆರೈಕೆ ಮತ್ತು ಶಿಕ್ಷಣ, ದೀನ್ ದಯಾಳ್ ಅಂತೋದಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ವಾರದ ಸಭೆ,

ಅಂಗನವಾಡಿ ಆಶಾ ಕಾರ್ಯಕರ್ತೆಯರ ಮನೆ ಭೇಟಿ, ಗ್ರಾಮ ಸಭೆಗಳು ಮಾಡುವುದು ಅಗತ್ಯ ಎಂದರು.

ಸಮುದಾಯವನ್ನು ಒಗ್ಗೂಡಿಸಿ ಜಾಥಾ, ಪೌಷ್ಠಿಕ ಮೇಳ, ರ್‍ಯಾಲಿ, ನಡಿಗೆ, ಶಾಲೆಗಳಲ್ಲಿ ಅರಿವು ಮೂಡಿಸುವುದು, ಪೌಷ್ಠಿಕ ಅಹಾರ ಪ್ರಾತ್ಯಕ್ಷತೆ ನಡೆಸುವುದು ಸಹ ಮುಖ್ಯ ಎಂದರು.

ಕೇಂದ್ರ ಸರ್ಕಾರದ ಪುರಸ್ಕೃತ ಈ ಪೋಷಣ್ ಅಭಿಯಾನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಖ್ಯ ಯೋಜನೆಯಾಗಿದ್ದು, ಇದರ ಜೊತೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆ, ಆಯುಷ್ ಇಲಾಖೆ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಶಿಕ್ಷಣ ಇಲಾಖೆ, ಯುವಜನ ಮತ್ತು ಕ್ರೀಡಾ ಇಲಾಖೆಗಳು ತಮ್ಮ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯಪ್ರವೃತ್ತರಾಗಿ ಯಶಸ್ವಿಗೊಳಿಸಬೇಕೆಂದರು.

ಈ ಪೋಷಣ್ ಅಭಿಯಾನದಡಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ, ಸಮುದಾಯ ರೇಡಿಯೋಗಳಲ್ಲಿ ಇದರ ಬಗ್ಗೆ ಅರಿವು ಮೂಡಿಸುವಿಕೆ. ಆರೋಗ್ಯ ಇಲಾಖೆಯಿಂದ ಔಷಧಿ, ಚುಚ್ಚುಮದ್ದು ನೀಡುವಿಕೆ, ಶಿಕ್ಷಣ ಇಲಾಖೆಯಿಂದ ಜಾಥಾ, ಸ್ವಚ್ಚತೆ ಬಗ್ಗೆ ಅರಿವು ಮೂಡಿಸುವಿಕೆ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಗ್ರಾಮ ಸಭೆ ಕೃಷಿ ಇಲಾಖೆಯಿಂದ ರೈತರ ಕ್ಲಬ್ ಸಭೆ, ಹಾಗು ಸುಗ್ಗಿ ಹಬ್ಬ ಏರ್ಪಡಿಸುವಿಕೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲ ಹಾಗೂ ಕೌಶಲ್ಯಭಿವೃದ್ಧಿ ಇಲಾಖೆಯಿಂದ ಶಾಲೆಬಿಟ್ಟ ಕಿಶೋರಿಯರನ್ನು ಕೌಶಲ್ಯ ಕೇಂದ್ರಗಳಿಗೆ ಭೇಟಿ ನೀಡುವ ಕುರಿತ ಕ್ರಮ ಕೈಗೊಳ್ಳಬೇಕೆಂದರು.

ಅಲ್ಲದೆ, ಹದಿಹರೆಯಾದ ಹುಡುಗರ ಸಮಸ್ಯೆಗಳ ಬಗ್ಗೆ ಸಂದೇಶವನ್ನು ಸಾರಲು ಎನ್.ಸಿ.ಸಿ. ಮುಂತಾದ ಸಂಸ್ಥೆಗಳಿಂದ ಸಂಪನ್ಮೂಲ ಬಳಸಿ ಕಾರ್ಯಕ್ರಮ ರೂಪಿಸುವುದು ಸಹ ಅಗತ್ಯ ಎಂದು ತಿಳಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸೇರಿದಂತೆ ವಿವಿಧ ಇಲಾಖೆಗಳ ಸರ್ಕಾರದ ಕಾರ್ಯದರ್ಶಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

## ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಸೆಪ್ಟೆಂಬರ್ 5 ರಂದು ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಭವನ ಸಭಾಂಗಣ, ಮಿಲ್ಲರ್ ರಸ್ತೆ, ಮಹಾವೀರ್ ಜೈನ್ ಆಸ್ಪತ್ರೆ ಹತ್ತಿರ, ವಸಂತನಗರ, ಬೆಂಗಳೂರು ಇಲ್ಲಿ ಆಚರಿಸಲಾಗುತ್ತಿದೆ.

ಈ ಸಮಾರಂಭದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ವಹಿಸಲಿದ್ದಾರೆ. ಶಿಕ್ಷಣ ಸಚಿವರು ಸೇರಿದಂತೆ ಸಚಿವ ಸಂಪುಟದ ಸದಸ್ಯರು ಹಾಗೂ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಅರ್ಹ ಶಿಕ್ಷಕರಿಗೆ ನೀಡಿ ಗೌರವಿಸಲಾಗುವುದು.

## ವಿಜ್ಞಾನ-ಗಣಿತ ಒಲಂಪಿಯಾಡ್ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವತಿಯಿಂದ ರಾಜ್ಯದ ಪ್ರೌಢಶಾಲೆಗಳಲ್ಲಿ 9ನೇ ವರ್ಗದ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆ, ಚುರುಕುತನ ಹಾಗೂ ಕೌಶಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಯೋಗದೊಂದಿಗೆ ಜಿಲ್ಲಾ ಹಾಗೂ ರಾಜ್ಯಮಟ್ಟದ ವಿಜ್ಞಾನ-ಗಣಿತ ಒಲಂಪಿಯಾಡ್ ಸ್ಪರ್ಧೆಯನ್ನು ಸಂಘಟಿಸಲಾಗುತ್ತದೆ

ವಿಜ್ಞಾನ-ಗಣಿತ ಒಲಂಪಿಯಾಡ್ ಸ್ಪರ್ಧೆಯು ಒಂದು ಪಠ್ಯ ಪೂರಕ ಚಟುವಟಿಕೆಯಾಗಿದ್ದು, ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಜ್ಞಾಪಕಶಕ್ತಿ ವೃದ್ಧಿಗೆ ಸಹಕಾರಿಯಾಗಲಿದೆ. ರಾಜ್ಯದ ಯಾವುದೇ ಸರ್ಕಾರಿ/ಖಾಸಗಿ/ಅನುದಾನ ರಹಿತ ಶಾಲೆಗಳ ಒಂಭತ್ತನೇ ವರ್ಗದ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಜಿಲ್ಲಾ ಮಟ್ಟದ ಸ್ಪರ್ಧೆಯು ಸೆಪ್ಟೆಂಬರ್ 22 ರಂದು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ/ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಗದಿಪಡಿಸಿದ ಸ್ಥಳದಲ್ಲಿ ಜರುಗಲಿದೆ.

ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಯು 1 ರಿಂದ 9ನೇ ತರಗತಿಯ ವಿಜ್ಞಾನ-ಗಣಿತ ಪಠ್ಯವನ್ನು ಆಧರಿಸಿದ್ದು, 1 ಗಂಟೆ 40 ನಿಮಿಷಗಳ ಕಾಲ ಜರುಗುವ ಸ್ಪರ್ಧೆಯು ಲಿಖಿತ ರೂಪದಲ್ಲಿ ಇರಲಿದ್ದು, 100

ಅಂಕಗಳನ್ನೊಳಗೊಂಡ ಬಹು ಆಯ್ಕೆವುಳ್ಳ 100 ಪ್ರಶ್ನೆಗಳುಳ್ಳ OMR Sheet ಪದ್ಧತಿಯಲ್ಲಿರುತ್ತದೆ. ಕನ್ನಡ ಅಥವಾ ಇಂಗ್ಲೀಷ್ ಭಾಷೆಗಳಲ್ಲಿ ಬರೆಯಬಹುದು. ಅಲ್ಲದೆ ತಪ್ಪು ಉತ್ತರಗಳಿಗೆ ಅಂಕಗಳನ್ನೂ ಸಹ ಕಡಿತಗೊಳಿಸಲಾಗುತ್ತದೆ.

ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಅತೀ ಹೆಚ್ಚು ಅಂಕಗಳಿಸಿ ವಿಜೇತರಾಗುವ 3 ವಿದ್ಯಾರ್ಥಿಗಳಿಗೆ ತಲಾ 2,000/- ರೂ ಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು ಅದಲ್ಲದೆ ಜಿಲ್ಲಾ ಮಟ್ಟದಲ್ಲಿ ಅತೀ ಹೆಚ್ಚು ಅಂಕಗಳಿಸುವ ಮೂವರು ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಗೊಳ್ಳುತ್ತಾರೆ. ರಾಜ್ಯ ಮಟ್ಟದ ಸ್ಪರ್ಧೆಯು ಅಕ್ಟೋಬರ್ 19 ಹಾಗೂ 20 ರಂದು ವಿಜಯಪುರ ನಗರದಲ್ಲಿ ಜರುಗಲಿದ್ದು, ರಾಜ್ಯದ ಮಟ್ಟದಲ್ಲಿ ವಿಜೇತರಾಗುವ ಮೂವರು ವಿದ್ಯಾರ್ಥಿಗಳಿಗೆ 10,000/- ರೂ. ಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

ಈ ಸ್ಪರ್ಧೆಯಲ್ಲಿ ಒಂದು ಶಾಲೆಯಿಂದ ಗರಿಷ್ಠ 10 ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶವಿದ್ದು, ಆಸಕ್ತ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ತಮ್ಮ ಮುಖ್ಯೋಪಾಧ್ಯಾಯರ ಮೂಲಕ ಸೆಪ್ಟೆಂಬರ್ 9 ರೊಳಗಾಗಿ ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಭವನ, ನಂ. 24/2, 21ನೇ ಮುಖ್ಯರಸ್ತೆ, ಬನಶಂಕರಿ ಎರಡನೇ ಹಂತ, ಬೆಂಗಳೂರು ವಿಳಾಸಕ್ಕೆ ಅರ್ಜಿ ಸಲ್ಲಿಸುವ ಮೂಲಕ/ಇ-ಮೇಲ್ krvp.info@gmail.com / ವಾಟ್ಸಪ್ 9483549159 ಮೂಲಕ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಗೌರವ ಕಾರ್ಯದರ್ಶಿ ಗಿರೀಶ್ ಕಡ್ಲೇವಾಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.